**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ**

ಅಸಲು ದಾವೆ ನಂ**. 238/2020** ದಿನಾಂಕಃ **07.07.2026**
ಪಿ.ಡಬ್ಲೂಃ**-01**

**: ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು :**

ಸಾಕ್ಷಿಯು ಮರಾಠಿ ಭಾಷಿಕರಾಗಿದ್ದು ಕನ್ನಡ ಭಾಷೆ ಬಾರದೆ ಇರುವುದರಿಂದ ಶ್ರೀ.NSH ರವರನ್ನು ಕನ್ನಡ ಅನುವಾದಕರನ್ನಾಗಿ ನೇಮಿಸಲಾಯಿತು, ಅನುವಾದಕರ ಶುಲ್ಕವನ್ನು ರೂ.300/- ಗಳನ್ನು ನಿಗದಿಪಡಿಸಲಾಯಿತು ಮತ್ತು ಅವರ ಸಹಾಯದಿಂದ ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ 3 ರಿಂದ 7 ನೇ ಪ್ರತಿವಾದಿ ಪರವಾಗಿಃ</u>**

ನನ್ನ ತಂದೆ 3ನೇ ಪ್ರತಿವಾದಿಯನ್ನು ಬೇಟಿ ಮಾಡಿ ದಾವಾ ಆಸ್ತಿ ಮಾರಾಟ ಮಾಡುವ ಕುರಿತು ಇಚ್ಚೆ ವ್ಯಕ್ತ ಪಡಿಸಿದ್ದರು ಎಂದರೆ ಸರಿಯಲ್ಲ. ಅದೇರೀತಿ ಪ್ರತಿವಾದಿಯರು ದಾವಾ ಆಸ್ತಿಯನ್ನು ರೂ.4 ಲಕ್ಷರೂಗಳಿಗೆ ಖರೀದಿ ಮಾಡಲು ಒಪ್ಪಿದ್ದರು ಎಂದರೆ ಸರಿಯಲ್ಲ. ಅದೇರೀತಿ ರೂ. 3,00,000/- ರೂ.ಗಳನ್ನು ಮುಂಗಡವಾಗಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ಅದೇರೀತಿ 08.02.2010 ಕ್ಕೆ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಸಮಯಕ್ಕೆ ನನ್ನ ತಾಯಿ ಸಹ ಒಪ್ಪಿ ಗೆ ನೀಡಿ ಕರಾರಿಗೆ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ರೈತಾವಿ ಮಾಡಲು ಸಹಿ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಕರಾರಿನಂತೆ ನಾನು ಕ್ರಯ ಪತ್ರ ಮಾಡಿಕೊಳ್ಳಲು ಬದ್ದರಿದ್ದೇವೆ ಎಂದರೆ ಸರಿಯಲ್ಲ. ಕರಾರಿನಂತೆ ಕ್ರಯ ಪತ್ರ ಮಾಡಿಕೊಡುವ ಸಂದರ್ಭದಲ್ಲಿ ಉಳಿಕೆ ಹಣ ಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. 3 ವರ್ಷಗಳ ಒಳಗಾಗಿ ಕ್ರಯಪತ್ರ ಮಾಡಿಕೊಡುವುದಾಗಿ ಕರಾರು ಆಗಿತ್ತು ಎಂದರೆ ಸರಿಯಲ್ಲ.

ದಿಃ 08.02.2013 ರಂದು 3ನೇ ಪ್ರತಿವಾದಿಯು ಪುನಃ 1ಲಕ್ಷ ರೂ. ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಅದರಂತೆ ಹಿಂಬರಹ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ತಂದೆ, ತಾತಾ, ತಾಯಿ ಎಲ್ಲರೂ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಖೊಟ್ಟಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಅದೇರೀತಿ ರೈತಾವಿ ಸಲುವಾಗಿ ಸಹಿ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿಗೆ ಮರು ಮಂಜುರಾತಿ ಆಗಿರುವ

ಕಾರಣ ನಮಗೆ ಅದರಲ್ಲಿ ಯಾವುದೇ ಹಿಸ್ಸಾ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಓಂಕಾರಮೂರ್ತಿ ಹೆಚ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ